ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಸಿ.ಸಿಃ 1296/2024
ಚಾ. ಸಾ 03
ಫ್ರಾ.ಸಾ 03

| | | |
|---|---|---|
| ಸಾಕ್ಷಿದಾರರ ಹೆಸರು | : | ಕನ್ನಿಕಾ |
| ತಂದೆಯ ಹೆಸರು | : | ವಿಶ್ವನಾಥ |
| ವಯಸ್ಸು | : | 24 |
| ಉದ್ಯೋಗ | : | ವಿದ್ಯಾರ್ಥಿ |
| ವಾಸಸ್ಥಳ | : | ಹೊನ್ನಪ್ಪಕುದುರು, ಕೆಮ್ಮಣ್ಣು , ಉಡುಪಿ |

ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಅಭಿಯೋಜಕರಿಂದಃ

ದಿ 01-02-2021 ರಂದು ಸುಮಾರು ಬೆಳಿಗ್ಗೆ 8.45 ರ ಸಮಯದಲ್ಲಿ ನಮ್ಮ ಹಿಂದಿನ ಮನೆಯ ಸರಸ್ವತಿರವರ ನಾಯಿ ನಮ್ಮ ಮನೆಯ ಕೋಳಿಯನ್ನು ಕಚ್ಚಿಕೊಂಡು ಹೋಗಿದ್ದು , ನನ್ನ ತಾಯಿ ಚಾಸಾ 1 ರವರು ನಮ್ಮ ಮನೆಯ ತೋಟದ ದಂಡೆಯ ಬದಿಯಲ್ಲಿ ನಿಂತು 2 ನೇ ಆರೋಪಿ ಯ ಬಳಿ ನಾಯಿಯನ್ನು ಕಟ್ಟಿ ಹಾಕಲು ಹೇಳಿದಾಗ ಆಗ 2 ನೇ ಆರೋಪಿ ನನ್ನ ತಾಯಿಗೆ ಹೇ ಸೂಳೆ ನೀನೇನು ಹೇಳುವುದು ನಿನ್ನ ಗಂಡ ಮರದಿಂದ ಬಿದ್ದು ಸತ್ತು ಹೋಗಲಿ ಎಂದು ಹೇಳಿದರು . ಅಲ್ಲೇ ಇದ್ದ 1 ನೇ ಆರೋಪಿ ನನ್ನ ತಾಯಿಯ ಕುತ್ತಿಗೆ ಯನ್ನು ಹಿಡಿದಳು . 2 ನೇ ಆರೋಪಿ ನನ್ನ ತಾಯಿಯ ಎಡಕಾಲಿಗೆ ಒಂದು ಕೋಲಿನಿಂದ ಹೊಡೆದರು ಮತ್ತು ಮುಖಕ್ಕೆ ಕೈಯಿನಿಂದ ಹೊಡೆದನು . 1 ನೇ ಆರೋಪಿ ಸರಸ್ವತಿ ನನ್ನ ತಾಯಿಯನ್ನು ನೆಲಕ್ಕೆ ದೂಡಿದರು . ಆಗ 2 ನೇ ಆರೋಪಿ ನನ್ನ ತಾಯಿ ಧರಿಸಿದ ಬಟ್ಟೆಯನ್ನು ಹರಿದು ಹಾಕಿರುತಾನೆ . ಆಗ ನಾನು ನನ್ನ ತಾಯಿಯನ್ನು ರಕ್ಷಣೆ ಮಾಡಲು ಬಂದಾಗ 2 ನೇ ಆರೋಪಿ ನನ್ನ ಕೈಯನ್ನು ಹಿಡಿದು ಎಳೆದುಕೊಂಡು ಹೋಗಿ ನನ್ನ ಕೈಯಲ್ಲಿ ಇದ್ದ ಮೊಬೈಲ್ ನ್ನು ಪಾದೆ ಕಲ್ಲಿಗೆ ಕುಟ್ಟಿ ಪುಡಿ ಮಾಡಿರುತಾನೆ

ಮತ್ತು ನನ್ನ ಜುಟ್ಟನ್ನು ಹಿಡಿದು ಎಳೆದಿರುತ್ತಾನೆ . 1 ಮತ್ತು 2 ನೇ ಆರೋಪಿ ನನಗೆ ಮತ್ತು ನನ್ನ ತಾಯಿಗೆ ಹಲ್ಲೆ ಮಾಡಿದಾಗ ನನ್ನ ತಂದೆ ಚಾಸಾ 2 ರವರು ನಮ್ಮನ್ನು ರಕ್ಷಣೆ ಮಾಡಲು ಬಂದಾಗ 1 ನೇ ಆರೋಪಿ ನನ್ನ ತಂದೆಯ ಬೆನ್ನಿಗೆ ಕಲ್ಲು ಎಸೆದಿರುತ್ತಾನೆ . ಆಗ 2 ನೇ ಆರೋಪಿ ನಮ್ಮೆಲ್ಲರನ್ನು ಕುರಿತು ನಿಮ್ಮನ್ನು ನೋಡಿಕೊಳ್ಳುತ್ತೇನೆ ನಿಮ್ಮನ್ನು ಒಂದಲ್ಲ ಒಂದು ದಿನ ಸುಮ್ಮನೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ . ನಂತರ ನಾನು ಮತುತ ಚಾಸಾ 1 ಮತ್ತು 2 ರವರು ಕೂಡಲೇ ಪೊಲೀಸ್ ಠಾಣೆಗೆ ಹೋದೆವು . ಅಲ್ಲಿ ಪೊಲೀಸರು ನಮಗೆ ನೀವು ಜಿಲ್ಲಾ ಆಸ್ಪತ್ರೆ ಗೆ ಹೋಗಿ ಚಿಕಿತ್ಸೆ ಪಡೆಯಲು ತಿಳಿಸಿರುತ್ತಾರೆ . ನಂತರ ಚಿಕಿತ್ಸೆಯ ಬಳಿಕ ನಾವು ಪೊಲೀಸ್ ಠಾಣೆಗೆ ಬಂದು ಸಂಜೆ 6.15 ರ ಸಮಯದಲ್ಲಿ ಚಾಸಾ 1 ನನ್ನ ತಾಯಿ ದೂರು ನೀಡಿರುತ್ತಾರೆ .

02-02-2021 ರಂದು ಪೊಲೀಸರು ಸಂಜೆ 5.00 ರಿಂದ 5.45 ರ ಸಮಯದಲ್ಲಿ ಚಾಸಾ -1 ರವರು ತಕ್ಷೀರು ಸ್ಥಳ ತೋರಿಸಿದ ಮೇರೆಗೆ ಮಹಜರು ಮಾಡಿರುತ್ತಾರೆ. ಆಗ ನಾನು ಅಲ್ಲಿ ಹಾಜರಿದ್ದೆ . 2 ನೇ ಆರೋಪಿ ನಮ್ಮ ತಾಯಿಗೆ ಹಲ್ಲೆ ಮಾಡಿದ ಕೋಲನ್ನು ನಮ್ಮ ತಾಯಿ ಹಲ್ಲೆ ಮಾಡಿದ ಸ್ಥಳದಲ್ಲಿ ಪೊಲೀಸರಿಗೆ ತೋರಿಸಿರುತಾರೆ, ಅದನ್ನು ಪೊಲೀಸರು ಜಪ್ತಿಪಡಿಸಿಕೊಂಡಿರುತ್ತಾರೆ. 2 ನೇ ಆರೋಪಿ ಕುಟ್ಟಿ ಪುಡಿ ಮಾಡಿದ ಮೊಬೈಲ್‌ನ್ನು ಪೊಲೀಸರಿಗೆ ನಾನು ನೀಡಿರುತ್ತೇನೆ. ಈ ಎಲ್ಲಾ ವಿಚಾರಗಳನ್ನು ಪೊಲೀಸರಿಗೆ ತಿಳಿಸಿರುತ್ತೇನೆ . ನಮಗೆ ಆ ದಿನ ಹಲ್ಲೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿಗಳಾಗಿರುತ್ತಾರೆ .

ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದ ಃ

ನಿಮ್ಮ ಮನೆ ಮತ್ತು ಆರೋಪಿಗಳ ಮನೆಗಳ ನಡುವೆ ಎಷ್ಟು ಅಂತರ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಮನೆಯಿಂದ ಆರೋಪಿಗಳ ಮನೆ ಸುಮಾರು 150-200 ಅಡಿ ಇರಬಹುದು ಎಂದು ತಿಳಿಸಿರುತ್ತಾರೆ . ನಮ್ಮ ಮನೆಯಿಂದ ಆರೋಪಿಗಳ ಮನೆ

1500 ಅಡಿ ಅಂತರ ಇದೆ ಎಂದರೆ ಸಾಕ್ಷಿ ನಾನು ಅಂದಾಜಿನ ಮೇಲೆ ಹೇಳಿರುತ್ತೇನೆ ನಾನು ಲೆಕ್ಕ ಮಾಡಿಲ್ಲ ಎಂದು ತಿಳಿಸಿರುತ್ತಾರೆ. ನಾವು ನಮ್ಮ ಮನೆಯಲ್ಲಿ ಮಾತನಾಡಿದರೇ ಆರೋಪಿಗಳಿಗೆ ಕೇಳಿಸುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ಆರೋಪಿಗಳು ಅವರ ಮನೆಯಲ್ಲಿ ಮಾತನಾಡುವುದು ನಮಗೆ ಕೇಳಿಸುವುದಿಲ್ಲ. ನನ್ನ ತಾಯಿ ಆರೋಪಿಗಳ ಮನೆಯ ಅಂಗಳಕ್ಕೆ ಹೋಗಿಲ್ಲ . ನಮ್ಮ ಮನೆಯ ಹತ್ತಿರಕ್ಕೆ ಆರೋಪಿಗಳು ಬಂದು ಗಲಾಟೆ ಮಾಡಿರುತ್ತಾರೆ . ಆರೋಪಿಗಳ ಕೈಯಲ್ಲಿ ಮೊಬೈಲ್ ಇತ್ತೋ ಇಲ್ಲವೋ ನಾನು ನೋಡಿಲ್ಲ. ನಾನು ನಮ್ಮ ತಂದೆ ಇರುವಲ್ಲಿಗೆ ಹೋಗಿಲ್ಲ, ನಮ್ಮ ತಂದೆಯೇ ನಮ್ಮನ್ನು ರಕ್ಷಣೆ ಮಾಡಲು ನಮ್ಮ ಬಳಿ ಬಂದಿರುತ್ತಾರೆ. ವಿಜಯನು ನನ್ನನ್ನು ಅವರ ತೋಟಕ್ಕೆ ಎಳೆದುಕೊಂಡು ಹೋಗಿದ್ದರಿಂದ ನನ್ನ ತಂದೆ ನನ್ನನ್ನು ರಕ್ಷಣೆ ಮಾಡಲು ವಿಜಯನ ತೋಟಕ್ಕೆ ಬಂದಿದ್ದರು . ನನ್ನ ಕೈ ಮತ್ತು ನನ್ನಜುಟ್ಟನ್ನು ಹಿಡಿದು ವಿಜಯನು ಅವರ ತೋಟಕ್ಕೆ ಎಳೆದುಕೊಂಡು ಹೋಗಿರುತಾನೆ . ಪೊಲೀಸರು ನನ್ನನ್ನು ತನಿಖೆ ಮಾಡಿರುತ್ತಾರೆ . ಪೊಲೀಸರಿಗೆ ನಾನು ಹೇಳಿಕೆ ನೀಡುವಾಗ ವಿಜಯನು ನನ್ನ ಕೈ ಹಿಡಿದು ಎಳೆದುಕೊಂಡು ಹೋಗಿರುತಾನೆ ಎಂದು ಹೇಳಿರುತ್ತೇನೆ. ಆ ರೀತಿ ಹಿಡಿದುಕೊಂಡು ಹೋಗುವಾಗ ನನ್ನ ಕೈಗೆ ಗಾಯವಾಗಿತ್ತು. ಆತ ಹಿಡಿದುಕೊಂಡು ಹೋದಾಗ ನನ್ನ ಬಟ್ಟೆ ಹರಿಯಲಿಲ್ಲ . ನನ್ನ ಕೈ ಹಿಡಿದು ಎಳೆದುಕೊಂಡು ಹೋದ ಬಗ್ಗೆ ನಾನು ವೈದ್ಯರಿಗೆ ಹೇಳಿಲ್ಲ. ವಿಜಯನು ನನ್ನ ಕೈ ಹಿಡಿದು ಎಳೆದ ಬಗ್ಗೆ ಮತ್ತು ನನಗೆ ಗಾಯವಾದ ಬಗ್ಗೆ ನಾನು ಇದೆ ಪ್ರಥಮ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಕೂದಲನ್ನು ಮತ್ತು ಬಟ್ಟೆ ಯನ್ನು ಜಪ್ತಿಪಡಿಸಿಕೊಂಡಿಲ್ಲ . ನನ್ನ ಎಷ್ಟು ಕೂದಲು ಕಿತ್ತು ಹೋಯಿತು ಎಂದು ನನಗೆ ಗೊತಿಲ್ಲಅದು ಆರೋಪಿ ಕೈಗೆ ಹೋಗಿದ್ದರಿಂದ ಅದನ್ನು ಆತನೇ ಹೇಳಬೇಕು. ವಿಜಯನು ನನ್ನ ಕೈ ಮತ್ತು ಕೂದಲನ್ನು ಹಿಡಿದು ಎಳೆಯದೇ ಇರುವುದರಿಂದ ನನಗೆ ಯಾವುದೇ ರೀತಿಯ ಗಾಯವಾಗಿಲ್ಲ ಎಂದರೆ ಸರಿಯಲ್ಲ .

ಆರೋಪಿ ಸರಸ್ವತಿ ರವರ ಮಗ ವಿನೋದ್ ನಾವು ಅವರ ಜಾಗದಲ್ಲಿ ಮನೆ ಕಟ್ಟುತಿದ್ದೇವೆ ಎಂದುನಮ್ಮ ವಿರುದ್ದದಾವೆ ಹಾಕಿದ್ದಾರೆ ಎಂದರೆ ಸಾಕ್ಷಿ ನಾವು ನಮ್ಮ ಜಾಗದಲ್ಲಿ ಶೌಚಾಲಯ ಕಟ್ಟುತಿದ್ದೆವು ಆ ಬಗ್ಗೆ ಅವರು ದಾವೆ ಹಾಕಿರುತಾರೆ ಎಂದು ತಿಳಿಸಿರುತ್ತಾರೆ. ನಾವು ಕಟ್ಟಬಾರದು ಎಂದು ನ್ಯಾಯಾಲಯ ತಡಯಾಜ್ಞೆ ನೀಡಿದೆ ಎಂದರೆ ಸರಿಯಲ್ಲ ನೋಟಿಸು ಮಾತ್ರ ಕೊಟ್ಟಿರುತ್ತಾರೆ . ನ್ಯಾಯಾಲಯ ತಡೆಯಾಜ್ಞೆ ಕೊಟ್ಟಿದ್ದರೂ ಕೂಡ ನಾವು ಶೌಚಾಲಯ ಕಟ್ಟುತಿದ್ದೇವೆ ಎಂದರೆ ಸರಿಯಲ್ಲ. ನಾವು ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ ಕೂಡ ಶೌಚಾಲಯ ಕಟ್ಟುತಿದ್ದರಿಂದ ನ್ಯಾಯಾಲಯದ ಆದೇಶದ ಉಲ್ಲಂಘನೆಗಾಗಿ ವಿನೋದ್ ಸ್ರದ್ರಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಹಾಕಿರುತ್ತಾನೆ ಎಂದರೆ ಸರಿ . ನಮ್ಮ ವಿರುದ್ಧ ಕೂಡ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿ . ಸರಸ್ವತಿ ರವರು ಯಾವ ಆಸ್ಪತ್ರೆ ಗೆ ಸೇರಿದರು ಎಂದುನನಗೆ ಗೊತ್ತಿಲ್ಲ ಕಾರಣ ನಾವು ಯಾವುದೇ ಹಲ್ಲೆ ಮಾಡಿಲ್ಲ . ನಾವು ಮಾಡಿದ ಹಲ್ಲೆಯ ಹಿನ್ನಲೆಯಲ್ಲಿ ಒಂದನೇ ಆರೋಪಿ ದಿ 01-02-2021 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನಾವು ಏನೂ ಮಾಡಿಲ್ಲ ಎಂದುತಿಳಿಸಿರುತ್ತಾರೆ. 2 ನೇ ಆರೋಪಿ 1 ನೇ ಆರೋಪಿಯ ಆರೈಕೆ ಮಾಡಲು ಆಸ್ಪತ್ರೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ . ನಾನು ಹೇಳುವ ರೀತಿ ಆರೋಪಿತರು 01-02-2021 ರಂದು ಬೆಳಿಗ್ಗೆ 11.00 ಗಂಟೆಗೆ ತಕ್ಷೀರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ಆರೋಪಿಗಳು ಆಸ್ಪತ್ರೆ ಗೆ ದಾಖಲಾದ ನಂತರ ಆ ವಿಚಾರ ತಿಳಿದ ನಂತರ ಮತ್ತು ಪೊಲೀಸರಿಗೆ ಅವರು ದೂರು ಕೊಟ್ಟ ವಿಚಾರ ತಿಳಿದ ನಂತರ ನಾವು ಸಂಜೆ 6.00 ರ ಸಮಯದಲ್ಲಿ ಸುಳ್ಳು ಕತೆ ಕಟ್ಟಿ ಈ ಒಂದು ಸುಳ್ಳು ದೂರನ್ನು ಕೊಟ್ಟು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನೀಡಿದ ಸುಳ್ಳು ದೂರಿಗೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ

ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ರೀತಿಯ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ .

ಮರುವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.